## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ಸಕಾಅ/ವಾ.ನಂ.39/ಪಿಆರ್/ 6 /2020-21

ಸಹಾಯಕ ಕಾರ್ಯಪಾಲಕ ಅಭಿಯಂತರರವರ ಕಛೇರಿ
ಪೀಣ್ಯ ಕೈಗಾರಿಕಾ ಪ್ರದೇಶ ಉಪವಿಭಾಗ, ದಾಸರಹಳ್ಳಿ ವಲಯ
ಹೆಚ್.ಎಂ.ಟಿ.ಬಡಾವಣೆ, ನಾಗಸಂದ್ರ ಪೋಸ್ಟ್
ಬೆಂಗಳೂರು. ದಿನಾಂಕ : 19-12-2020

### ವಾರ್ಡ್ -39ರ ವಾರ್ಡ್ ಸಭೆಯ ನಡವಳಿ

ದಿನಾಂಕ:-19.12.2020 ರಂದು ಪೀಣ್ಯ ಕೈಗಾರಿಕ ಪ್ರದೇಶ ಉಪ ವಿಭಾಗ ವಾರ್ಡ್ ನಂ.39 ರ ವಾರ್ಡ್ ಕಛೇರಿಯಲ್ಲಿ ಶ್ರೀ.ಶಿವಕುಮಾರ್, ವಾರ್ಡ್-39 ರ ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭಾ ನಡವಳಿಗಳು.

ಹಾಜರಿದ್ದವರು:

1. ಶ್ರೀ ಹೆಚ್.ಶಿವಕುಮಾರ್, ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು
2. ಶ್ರೀ.ಡಿ.ಎಸ್.ಮಂಜುನಾಥ್, ಸಹಾಯಕ ಅಭಿಯಂತರರು ಮತ್ತು ಕಾರ್ಯದರ್ಶಿ
3. ಶ್ರೀಮತಿ.ಶಿವಮ್ಮ.ಎಸ್, ಸಹ ಕಂದಾಯ ಅಧಿಕಾರಿ, ಪೀಣ್ಯ ಕೈಗಾರಿಕಾ ಪ್ರದೇಶ
4. ಶ್ರೀ.ಜಗದೀಶ್.ಹೆಚ್.ಹಿರಿಯ ಆರೋಗ್ಯ ಪರಿವೀಕ್ಷಕರು,
5. ಶ್ರೀ ಹೆಚ್.ರಮೇಶ್, ಕಿರಿಯ ಆರೋಗ್ಯ ಪರಿವೀಕ್ಷಕರು ಮತ್ತು ಸದಸ್ಯರು.
6. ಜನನಿ.ಡಿ.ದೇವರಾಜ್, ಸಹಾಯಕ ಅಭಿಯಂತರರು ವಾರ್ಡ್ ನಂ.39 ಚೊಕ್ಕಸಂದ್ರ
7. ಶ್ರೀಮತಿ.ಸುಧಾಮಣಿ.ಕೆ, ಪಶುಪಾಲನೆ ಇಲಾಖೆ, ದಾ.ವ
8. ಶ್ರೀ ಸಮಿಉಲ್ಲಾ ತೋಟಗಾರಿಕೆ ಇಲಾಖೆ ಪರಿವೀಕ್ಷಕರು.ದಾ.ವ
9. ಶ್ರೀ. ಸಿ.ಬಿ. ಕೃಷ್ಣಪ್ಪ ,ಅರಣ್ಯ ಇಲಾಖೆ, ದಾಸರಹಳ್ಳಿ ವಲಯ
10. ಶ್ರೀ. ವಸಂತ್ ಕುಮಾರ್, ಬಿ.ಬಿ.ಎಂ.ಪಿ, ಮಾರ್ಷಲ್
11. ಶ್ರೀ ಹೆಚ್.ಆರ್.ಮನೋಜ್ ಬಿ.ಬಿ.ಎಂ.ಪಿ, ಮಾರ್ಷಲ
12. ಶ್ರೀಮತಿ. ಕವಿತ, ಕಲ್ಯಾಣ ಇಲಾಖೆ, ದಾಸರಹಳ್ಳಿ ವಲಯ
13. ಶ್ರೀ.ಸಿದ್ದೇಶ್.ಕೆ, ಇ.ಎಸ್.ಎಫ್
14. ಶ್ರೀಮತಿ.ಗಂಗಮ್ಮ ಇ.ಎಸ್.ಎಫ್
15. ಶ್ರೀ.ಶಿವಶಂಕರ್, ಇ.ಎಸ್.ಎಫ್
16. ಶ್ರೀಮತಿ.ಕುಮಾರಿ, ಅನೂಷ್ ಗ್ರೂಪ್
17. ಶ್ರೀಮತಿ.ಸವಿತ, ಅನೂಷ್ ಗ್ರೂಪ್

ಮಾನ್ಯ ಅಧ್ಯಕ್ಷರ ಸ್ವಾಗತದೊಂದಿಗೆ ಸಭೆಯನ್ನು ಪ್ರಾರಂಭಿಸಲಾಯಿತು.

- ಕೋವಿಡ್ 19 ರ ಸೋಂಕು ಹರಡುವುದನ್ನು ತಡೆಗಟ್ಟುವ ಸಂಬಂಧ ಮುಂಜಾಗ್ರತ ಕ್ರಮಗಳು ಬಗ್ಗೆ ಸಭೆಯಲ್ಲಿ ಹಿರಿಯ ಆರೋಗ್ಯ ನಿರೀಕ್ಷರಾದ ಶ್ರೀ.ಜಗದೀಶ್ ರವರು ಹಾಜರಿದ್ದು ವಾರ್ಡ್ ಸಂಖ್ಯೆ 39 ರಲ್ಲಿ ಒಟ್ಟು +Veಕೇಸ್ 1648 ಇದ್ದು, ಅದರಲ್ಲಿ 1596 ಬಿಡುಗಡೆಗೊಂಡಿರುತ್ತಾರೆ. ಒಟ್ಟು ಇಲ್ಲಿಯವರೆಗೆ 18 ಜನ ಮೃತರಾಗಿರುತ್ತಾರೆ. ಅದರಂತೆ ಆಕ್ಟೀವ್ ಕೇಸ್ ಒಟ್ಟು 334 ಇರುತ್ತೆದೆ ಎಂದು ಸಭೆಗೆ ತಿಳಿಸಿದರು.
- ವಾರ್ಡ್ ವ್ಯಾಪ್ತಿಯಲ್ಲಿ ಮಾಸ್ಕ್ ಧರಿಸದೇ ಓಡಾಡಡುವವರಿಗೆ ಒಟ್ಟು 84 ಪ್ರಕರಣಗಳಿಗೆ ರೂ.21455.00 ರೂಗಳನ್ನು ದಂಡ ವಿಧಿಸಿರುವ ಬಗ್ಗೆ ಮಾರ್ಷಲ್ ರವರು ಸಭೆಗೆ ತಿಳಿಸಿದರು.
- ಘನತ್ಯಾಜ್ಯಕ್ಕೆ ಸಂಬಂಧಿಸಿದಂತೆ ವಿವರಿಸುತ್ತಾ ವಾರ್ಡ್ ಸಂಖ್ಯೆ 39 ರಲ್ಲಿ ಬ್ಲಾಕ್‌ಗಳಂತೆ ಆಟೋ ಟಿಪ್ಪರ್‌ಗಳು ಕಾರ್ಯನಿರ್ವಹಿಸುತ್ತಿದ್ದು, ಹಸಿ ಕಸವನ್ನು ಬೇರ್ಪಡಿಸಿ ಪಡೆಯಲಾಗುತ್ತಿದೆ ಅದರಂತೆ ಪ್ರತಿನಿತ್ಯ 7 ರಿಂದ 8 ಟನ್ ಹಸಿ ಕಸ ಬರುತ್ತಿದೆ ಇದನ್ನು ಹೆಚ್ಚಿಸಬೇಕೆಂದು ನೋಡಲ್ ಅಧಿಕಾರಿಗಳು ತಿಳಿಸಿದರು.
- ಬ್ಲಾಕ್ ಸ್ಪಾಟ್ ಕಡಿಮೆ ಮಾಡುವಂತೆ ಹಾಗೂ ನಿರ್ಮೂಲನೆ ಮಾಡುವಂತೆ ಹಾಗೂ ಮಾರ್ಷಲ್‌ಗಳ ಸಹಾಯದಿಂದ ದಂಡ ಹಾಕಿ ರಸ್ತೆ ಬದಿ ಕಸ ಹಾಕಿಸುವುದನ್ನು ಸಂಪೂರ್ಣವಾಗಿ ನಿಲ್ಲಿಸಬೇಕೆಂಧು ತಿಳಿಸಿದರು.

ಮು.ತಿ.ನೋ

- ಬೀದಿ ದೀಪ ನಿರ್ವಹಣೆ ಬಗ್ಗೆ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳಿಗೆ ರಸ್ತೆಯಲ್ಲಿ ಬೀದಿ ದೀಪ ಇಲ್ಲದಿರುವುದನ್ನು ಗುರುತಿಸಿ ತುರ್ತಾಗಿ, ಸರಿಪಡಿಸುವಂತೆ ತಿಳಿಸಲಾಯಿತು

- ಉದ್ಯಾನವನಗಳ ನಿರ್ವಹಣೆ ಬಗ್ಗೆ ತೋಟಗಾರಿಕೆ ಇಲಾಖೆ ವತಿಯಿಂದ ವಾರ್ಡಿನ ಉದ್ಯಾನವನಗಳಲ್ಲಿ ಉದಿರುವ ಎಲೆಗಳನ್ನು ಗೊಬ್ಬರ ಮಾಡುವಂತೆ ನೋಡಲ್ ಅಧಿಕಾರಿಗಳು ಸೂಚಿಸಿದರು.

- ರಾಜಕಾಲುವೆ ನಿರ್ವಹಣೆ ಬಗ್ಗೆ. ನೆಲಗದರನಹಳ್ಳಿ ಮುಖ್ಯರಸ್ತೆಯ ಬ್ರಿಡ್ಜ್ ಕಾಮಗಾರಿ ಪ್ರಗತಿಯಲ್ಲಿದ್ದು ಜನವರಿ 2021 ಮಾಹೆಗೆ ರಸ್ತೆ ಸಂಚಾರ ಸುಗಮವಾಗುವುದು ಹಾಗೂ ಕೆಲವೊಂದು ಕಡೆ ಹೂಳು ತೆಗೆಯುವ ಕೆಲಸ ಪ್ರಗತಿಯಲ್ಲಿರುತ್ತದೆ ಎಂದು ನೋಡಲ್ ಅಧಿಕಾರಿ ತಿಳಿಸಿದರು.

- ಭೋಜರಾಜ್ ಹಿರಿಯ ನಾಗರೀಕರು ಹೆಚ್.ಎಂ.ಟಿ.ಬಡಾವಣೆ ರವರು ಸದರಿಯವರ ಮನೆ ಬಳಿ ಮರ ಬೀಳುವ ಸಾಧ್ಯತೆ ಇದ್ದು ಮರ ತೆರವುಗಳೊಸುವಂತೆ ಅರ್ಜಿ ನೀಡಲಾಗಿದೆ ಎಂದು ಸಭೆಗೆ ತಿಳಿಸಿದರು. ಕ್ರಮ ವಹಿಸಲು ಅರಣ್ಯ ಇಲಾಖೆ ರವರಿಗೆ ನೋಡಲ್ ಅಧಿಕಾರಿಗಳು ತಿಳಿಸಿದರು.

- ಕಲ್ಯಾಣ ಇಲಾಖೆಯಿಂದ ಕವಿತ ರವರು ಹಾಜರಾಗಿದ್ದು ಲಘು ವಾಹನಕ್ಕೆ ರಿಯಾಯಿತಿ ಆಟೋ ಅಂಗವಿಕಲರಿಗೆ ತ್ರಿ ಚಕ್ರ ವಾಹನ ಪೌರಕಾರ್ಮಿಕರ ಮಕ್ಕಳಿಗೆ ಓದುವ ವಿದ್ಯಾರ್ಥಿಗಳಿಗೆ ಶಾಲೆಗೆ ಕಟ್ಟಿದ ಶುಲ್ಕವನ್ನು ಮರು ಪಾವತಿ ಮಾಡುವ ಬಗ್ಗೆ ಸಭೆಗೆ ತಿಳಿಸಿದರು

- ಬಿ.ಡಬ್ಲ್ಯೂ.ಎಸ್.ಎಸ್ ಬಿ ಮತ್ತು ಬೆಸ್ಕಾಂ ಇಲಾಖೆ ಪ್ರತಿ ಸಭೆಗೆ ಗೈರು ಹಾಜರಾಗಿರುತ್ತಾರೆ

  ಅಂತಿಮವಾಗಿ ನೋಡಲ್ ಅಧಿಕಾರಿಗಳು ಮಾತನಾಡಿ ಸಕಾಲದಲ್ಲಿ ಸಾರ್ವಜನಿಕರ ಕುಂದುಕೊರತೆಗಳಿಗೆ ಸ್ಪಂದಿಸಿ ಪರಿಹರಿಸಲು ಕ್ರಮ ತೆಗೆದುಕೊಂಡ ಎಲ್ಲಾ ಇಲಾಖೆಗಳ ಸಮನ್ವತೆಯಿಂದ ಕೆಲಸ ನಿರ್ವಹಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ವಂದನಾರ್ಪಣೆಯೊಂದಿಗೆ ಕಾರ್ಯದರ್ಶಿಗಳು ಸಭೆಯನ್ನು ಮುಕ್ತಾಯಗೊಳಿಸಿದರು.

| | |
|---|---|
| ಸದಸ್ಯ ಕಾರ್ಯದರ್ಶಿ<br>ಹಾಗೂ ಸಹಾಯಕ ಅಭಿಯಂತರರು<br>ವಾರ್ಡ್ ನಂ. 39 ಚೊಕ್ಕಸಂದ್ರ<br>ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ | ವಾರ್ಡ್ ಸಮಿತಿ ಅಧ್ಯಕ್ಷರು<br>ಹಾಗೂ ವಾರ್ಡ್‌ನ ನೋಡಲ್ ಅಧಿಕಾರಿ<br>ವಾರ್ಡ್ ನಂ. 39 ಚೊಕ್ಕಸಂದ್ರ<br>ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ |

<u>ಅಧಿಕಾರಿಗಳ ಮಾಹಿತಿಗಾಗಿ</u>

1. ಮಾನ್ಯ ಜಂಟಿ ಆಯುಕ್ತರು (ದಾಸರಹಳ್ಳಿ) ವಲಯ ರವರ ಅವಗಾಹನೆಗಾಗಿ ಮಂಡಿಸಿದೆ.
2. ಮುಖ್ಯ ಅಭಿಯಂತರರು, (ದಾಸರಹಳ್ಳಿ) ವಲಯ ರವರ ಅವಗಾಹನೆಗಾಗಿ ಮಂಡಿಸಿದೆ.
3. ಉಪ ನಿಯಂತ್ರಕರು (ಹಣಕಾಸು) ದಾ.ವ ರವರ ಮಾಹಿತಿಗಾಗಿ ಕಳುಹಿಸಿದೆ.
4. ಕಾರ್ಯಪಾಲಕ ಅಭಿಯಂತರರು, ದಾ.ವಿ ರವರ ಮಾಹಿತಿಗಾಗಿ ಕಳುಹಿಸಿದೆ.
5. ಸಹಾಯಕ ಕಾರ್ಯಪಾಲಕ ಅಭಿಯಂತರರು (ಪೀ.ಕೈ.ಪ್ರ)ರವರ ಮಾಹಿತಿಗಾಗಿ ಕಳುಹಿಸಿದೆ
6. ಸಹಾಯಕ ಕಾರ್ಯಪಾಲಕ ಅಭಿಯಂತರರು (ಘನತ್ಯಾಜ್ಯ) ರವರ ಮಾಹಿತಿಗಾಗಿ ಕಳುಹಿಸಿದೆ
7. ಸಹಾಯಕ ಕಾರ್ಯಪಾಲಕ ಅಭಿಯಂತರರು (ಖಘಳ) ರವರ ಮಾಹಿತಿಗಾಗಿ ಕಳುಹಿಸಿದೆ
8. ಸಹಾಯಕ ಕಾರ್ಯಪಾಲಕ ಅಭಿಯಂತರರು (ಃಘಖಃ)ರವರ ಮಾಹಿತಿಗಾಗಿ ಕಳುಹಿಸಿದೆ
9. ಸಹಾಯಕ ಕಾರ್ಯಪಾಲಕ ಅಭಿಯಂತರರು (ವಿದ್ಯುತ್) ರವರ ಮಾಹಿತಿಗಾಗಿ ಕಳುಹಿಸಿದೆ
10. ಸಹಾಯಕ ಕಾರ್ಯಪಾಲಕ ಅಭಿಯಂತರರು (ಯೋಜನೆ) ರವರ ಮಾಹಿತಿಗಾಗಿ ಕಳುಹಿಸಿದೆ
11. ಸಹಾಯಕ ಕಾರ್ಯಪಾಲಕ ಅಭಿಯಂತರರು ಬೆಸ್ಕಾಂ ಎನ್-5 ಪೀಣ್ಯ ರವರ ಮಾಹಿತಿಗಾಗಿ ಕಳುಹಿಸಿದೆ